೪.	ಚಾಮುಂಡಿ ಗ್ರಾನೈಟ್ಸ್ ಪ್ರೈ ಲಿ., ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ ಬೆಂಗಳೂರು	ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ, ಬೆಂಗಳೂರು
೫.	ಶಬರಿ ಗ್ರಾನೈಟ್ಸ್ ಪ್ರೈ ಲಿ. ನಂ. ೫೫೧೧ನೇ ಕ್ರಾಸ್, ರೆಸಿಡೆನ್ಸಿ ರಸ್ತೆ ಬೆಂಗಳೂರು– ೫೫	ದೊಡ್ಡ ಬಳ್ಳಾಪುರ ಇಂಡಸ್ಟ್ರಿಯಲ್ ಏರಿಯಾ.
೬.	ಕೆ. ಸುಬ್ಬಯ್ಯ ಶೆಟ್ಟಿ ಮೆ. ಸ್ಕಂದ ಗ್ರಾನೈಟ್ಸ್ ಪ್ರೈ ಲಿ., ಮಂಗಳೂರು	ಆನೇಕಲ್ ಇಂಡಸ್ಟ್ರೀಯಲ್ ಏರಿಯಾ

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ನಿಯಮಿತದ ನೌಕರರ ಕುರಿತು

೩೧೫. ಶ್ರೀ ಗೋಪಾಲ ಮುಕುಂದ ಕಾನಡೆ, (ಸಿರ್ಸಿ).— ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು.

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯಲ್ಲಿ ಇರುವ ಒಟ್ಟು ನೌಕರರ ಸಂಖ್ಯೆ ಎಷ್ಟು?

ಆ) ಅದರಲ್ಲಿ ಹರಿಜನ ಪಂಗಡದವರ ಸಂಖ್ಯೆ ಎಷ್ಟು?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಸಚಿವರು).—

ಅ) ೫೯೯

ಆ) ೭೪

ಕೈಮಗ್ಗಗಳಿಗೆ ನೂಲಿನ ಅಭಾವ ಕುರಿತು

೬೬. ಶ್ರೀ ಬಾಬುರೆಡ್ಡಿ ತುಂಗಳ (ಚೀಳಗಿ).— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ವಿಜಾಪುರ ಜಿಲ್ಲೆಯಲ್ಲಿರುವ ಒಟ್ಟು ಕೈಮಗ್ಗಗಳ ಸಂಖ್ಯೆ ಎಷ್ಟು?

ಆ) ಈ ಪೈಕಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧೀನದಲ್ಲಿರುವ ಕೈಮಗ್ಗಗಳ ಸಂಖ್ಯೆ ಎಷ್ಟು?

ಇ) ಕಳೆದ ಅನೇಕ ತಿಂಗಳುಗಳಿಂದ ನೂಲಿನ ತೀವ್ರ ಅಭಾವವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ನೂಲಿನ ಅಭಾವ ನೀಗಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ ಎ. ಜೀವಿಜಯ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ೨೪, ೬೮೯ ಕೈಮಗ್ಗಗಳು

ಆ) ೯,೧೦೧ ಕೈಮಗ್ಗಗಳು.

ಇ) ಬಂದಿದೆ.

ಈ) ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ ನ್ಯಾಷನಲ್ ಟೆಕ್ಸ್‌ಟೈಲ್ಸ್ ಕಾರ್ಪೋರೇಷನ್ ಹಾಗೂ ಸಹಕಾರಿ ಗಿರಣಿಗಳಿಂದ ನೂಲನ್ನು ಖರೀದಿಸಿ ನೇಕಾರರಿಗೆ ಸರಬರಾಜು ಮಾಡಲಾಗುತ್ತಿದೆ.